ಸಾಕ್ಷಿಯ ಹೆಸರುಃ ಫೈಜ್ ಅಹಮ್ಮದ್ ಖಾನ್

ದಿನಾಂಕ 31-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎಸ್. ವಕೀಲರಿಂದಃ

22) ನಾನು ಎಸ್.ಎಸ್.ಎಲ್.ಸಿ.ವರೆಗೆ ಓದಿರುತ್ತೇನೆ. ನನಗೆ ಇಂಗ್ಲಿಷ್ ಭಾಷೆ ಓದಲು ಬರುತ್ತದೆ. ನಿಡಿ-45 ಹಿಬಾ ನಾಮಾ ಪ್ರಕಾರ 1 ನೇ ಪ್ರತಿವಾದಿಗೆ 100X29 ಅಡಿ ಅಳತೆಯ ವಿಸ್ತೀರ್ಣ ಮಾತ್ರ ಬಂದಿರುತ್ತದೆ ಎಂದರೆ ಸರಿ ನಿಡಿ-05 ರ ಪ್ರಕಾರ ನಾವು ಸ್ವತ್ತನ್ನು 100X40 ಅಡಿ ಅಳತೆಯ ಸ್ವತ್ತನ್ನು ಖರೀದಿ ಮಾಡಿದ್ದೆವು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನಂತರ ತಿದ್ದುಪಡಿ ಪತ್ರ ಮಾಡಿಕೊಂಡಿದ್ದೆವು ಎನ್ನುತ್ತಾರೆ. ಈ ದಾವೆಯನ್ನು ವಾದಿಯರು ಸಲ್ಲಿಸಿದ ನಂತರ ನಾವು ತಿದ್ದುಪಡಿ ಪತ್ರವನ್ನು ಮಾಡಿಕೊಂಡಿದ್ದೆವು ಎಂದರೆ ನನಗೆ ಗೊತ್ತಿಲ್ಲ ನಿಡಿ-06 ನ್ನು ಸಾಕ್ಷಿಗೆ ತೋರಿಸಿ, ಅವರು ಅದನ್ನು ಓದಲು ಬರುವುದಿಲ್ಲ ಎನ್ನುತ್ತಾರೆ. ಸದರಿ ಪತ್ರವನ್ನು ನಾನು ಓದದೇ ಸಹಿ ಮಾಡಿರುತ್ತೇನೆ. ಸಾಕ್ಷಿ ಮುಂದುವರಿದು ಓದಿ ತಿಳಿಸಿದ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನನಗೆ ಕ್ರಯಪತ್ರ ಮಾಡಿರುವುದಾಗಿ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಕ್ರಯಪತ್ರವನ್ನು ಹಾಗೂ ಕ್ರಯದ ತಿದ್ದುಪಡಿ ಪತ್ರವನ್ನು ಬೇರೆ ಬೇರೆ ಬಿಕ್ಲಂದಾರರಿಂದ ಬರೆಯಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

23) ಕ್ರಯಪತ್ರವನ್ನು ನೊಂದಣಿ ಮಾಡಿಸಿಕೊಳ್ಳುವ ಸಮಯದಲ್ಲಿ ಖಾತಾ ಎಕ್ಸ್ ಟ್ರ್ಯಾಕ್ಟ್ ಜೈಬುನ್ನಿಸಾರವರ ಹೆಸರಿನಲ್ಲಿ 100X40 ಅಡಿಗೆ ಇರುವ ನಕಲಿ ದಾಖಲೆಯನ್ನು ಹಾಜರುಪಡಿಸಿ ನೊಂದಣಿ ಮಾಡಿಸಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-09 ರ ಪ್ರಕಾರ ಖಾತಾ ಜೈಬುನ್ನಿಸಾರವರ ಹೆಸರಿನಲ್ಲಿ 100X40 ಅಡಿಗೆ ಇದೆ ಎಂದರೆ ಸರಿ. ಕ್ರಯಪತ್ರ ತಿದ್ದುಪಡಿಯಾದ ನಂತರ ಜೈಬುನ್ನಿಸಾರವರ ಹೆಸರಿನಲ್ಲಿ 100X40 ಅಡಿ ಅಳತೆಯ ಜಾಗ ಅಥವಾ 100X29 ಅಡಿ ಅಳತೆಯ ಜಾಗ ಇದೆ ಎಂದು

ನಾನು ಪುರಸಭೆ ಕಾರ್ಯಾಲಯದಲ್ಲಿ ಹೋಗಿ ವಿಚಾರಿಸಿರುವುದಿಲ್ಲ. ನಿಡಿ-05 ರ ಪ್ರಕಾರ ದಾಖಲೆ ತಯಾರಿಸುವಾಗ, ವಕೀಲರಿಗೆ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿರುತ್ತೀರಾ ಎಂದರೆ ನಾನು ಕ್ರಯಪತ್ರ ಮಾಡಿಸಿಕೊಂಡಿಲ್ಲ , ನನ್ನ ಅಣ್ಣ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಈ ಕ್ರಯಪತ್ರದ ಬಗ್ಗೆ ಬಿಕ್ಲಂದಾರರಿಗೆ ನಾನೇನು ಹೇಳಿ ಬರೆಯಿಸಿಲ್ಲ. ನಿಡಿ-08 ರ ಪ್ರಕಾರ ಜೈಬುನ್ನಿಸಾರವರ ಹೆಸರಿನಲ್ಲಿ ಖಾತೆ 100X40 ಅಡಿ ಅಳತೆಗೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಪೇಶ್ವಾ ಮೊಹಮ್ಮದ್ ರವರಿಗೆ ದಾವಾಸ್ವತ್ತಿನಲ್ಲಿ ಎಂದೂ 100X80 ಅಡಿ ಅಳತೆಯ ಜಾಗ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ.

24) ನನ್ನ ಕೈಗೆ ಯಾವ ದಾಖಲೆಗಳನ್ನು ಜೈಬುನ್ನಿಸಾರವರು ಕೊಟ್ಟಿರುವುದಿಲ್ಲ. ದಾವಾಸ್ವತ್ತಿನಲ್ಲಿ ಒಂದು ಹಳೆಯ ಹೆಂಚಿನ ಮನೆ ಇದ್ದು, ಅದನ್ನು ಯಾವಾಗ ತೆಗೆದು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ಮತ್ತು ದಾನಪತ್ರದಲ್ಲಿ ಸ್ವತ್ತಿನ ಅಳೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ನೋಡಬೇಕು ಎನ್ನುತ್ತಾರೆ. ಸಾಕ್ಷಿಗೆ ಈಗ ನಿಡಿ-05 ನ್ನು ತೋರಿಸಿ, ಅಳತೆ 100X40 ಅಡಿ ಇದೆ ಎಂದು ಗುರುತಿಸಿರುತ್ತಾರೆ. ನಿಡಿ-45 ರಲ್ಲಿ ಸ್ವತ್ತಿನ ಅಳತೆ 100X29 ಅಡಿ ಇದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದ ನಂತರ ತಿದ್ದುಪಡಿ ದಾಖಲೆ ಮಾಡಲಾಗಿದೆ ಎನ್ನುತ್ತಾರೆ. ನನ್ನ ಅಣ್ಣನಿಗೆ ಯಾವ ಸಂದರ್ಭದಲ್ಲಿ ನಿಡಿ-45 ಹಿಬಾ ನಾಮಾ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಕ್ರಯಪತ್ರವನ್ನು ಮಾಡಿಸಿಕೊಂಡಾಗ ನಿಡಿ-45 ನನ್ನ ಅಣ್ಣನ ಬಳಿ ಇತ್ತೋ ಇಲ್ಲವೋ ಎಂದರೆ ಸಾಕ್ಷಿ ನನಗೆ ಜ್ಞಾಪಕ ಇಲ್ಲ ಎನ್ನುತ್ತಾರೆ. ನಿಡಿ-05 ಕ್ರಯಪತ್ರವನ್ನು ತಯಾರು ಮಾಡಿ, ಬೆರಳಚ್ಚು ಮಾಡಿಸುವಾಗ ನಾನು ವಕೀಲರ ಬಳಿ ಇರುವುದಿಲ್ಲ. ನಿಡಿ-05 ರ ಬಗ್ಗೆ ವಕೀಲರಿಗೆ ನಾನು ಯಾವುದೇ ಮಾಹಿತಿಯನ್ನು ತಿಳಿಸಿರುವುದಿಲ್ಲ. ನಾನು ನೊಂದಣಿ ಕಚೇರಿಗೆ ಹೋದಾಗ ನನಗೆ ಕ್ರಯಪತ್ರದ ಬಗ್ಗೆ ಗೊತ್ತಾಗಿರುತ್ತದೆ.

25) ಸಾಮಾನ್ಯವಾಗಿ ಪತ್ರದ ವ್ಯವಹಾರ ಮಾಡುವಾಗ , ಬರೆದುಕೊಡುವವರು ಅಥವಾ ತೆಗೆದುಕೊಳ್ಳುವವರ ಒಬ್ಬರ ಹೆಸರಿನಲ್ಲಿ ಸ್ಟಾಂಪ್ ಪೇಪರ್ ಅನ್ನು ತೆಗೆದುಕೊಳ್ಳಬೇಕು ಎಂದರೆ ಸರಿ. ನಿಡಿ-45 ನ್ನು ಸಾಕ್ಷಿಗೆ ಕೊಟ್ಟು ತೋರಿಸಿದಾಗ, ಸಾಕ್ಷಿ ಅದರಲ್ಲಿ ಮೊಹಮ್ಮದ್ ಶೇಕ್ ಅಹಮ್ಮದ್ ಪಂಚವಳ್ಳಿ ಗ್ರಾಮ, ಪಿರಿಯಾಪಟ್ಟಣ ಎಂದು ನಮೂದಿಸಿದೆ ಎನ್ನುತ್ತಾರೆ. ಅದರಲ್ಲಿ ಮೊಹಮ್ಮದ್ ಶೇಕ್ ಅಹಮ್ಮದ್‌ರವರ ತಂದೆಯ ಹೆಸರು ನಮೂದಿಸಿಲ್ಲ ಎಂದರೆ ಸರಿ. ಮೊಹಮ್ಮದ್ ಶೇಕ್ ಅಹಮ್ಮದ್‌ರವರು ನಿಸ್ಸಾರ್ ಅಹಮ್ಮದ್‌ರವರಿಗೆ ಹೇಗೆ ಸಂಬಂಧಿಸಿದವರು ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ, ನಿಡಿ-11 ರಲ್ಲಿ ಏನು ಬರವಣಿಗೆಯಾಗಿದೆ ಎಂದು ನನಗೆ ಗೊತ್ತಿಲ್ಲ. ನಿಡಿ-11 ರಲ್ಲಿ 100X29 ಅಡಿ ಅಳತೆಯ ಜಾಗ ಸೇರಿಕೊಂಡಿರುತ್ತದೆ ಎಂದು ಹಾಜರುಪಡಿಸಿರುತ್ತೇನೆ. ನಿಡಿ-11 ರಲ್ಲಿ ಜೈಬುನ್ನಿಸಾರವರಿಗಾಗಲೀ ಅಥವಾ ನಿಸ್ಸಾರ್ ಅಹಮ್ಮದ್‌ರವರಿಗಾಗಲೀ 100X40 ಅಡಿ ಅಳತೆಯ ಜಾಗ ಬಂದಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿರುವ ಸ್ವತ್ತಿನಲ್ಲಿ ನಾಡ ಹೆಂಚಿನ ಮನೆ ಮತ್ತು ಅಂಗಡಿ ಇದ್ದು, ಅವುಗಳನ್ನು ಈಗ ಹೊಡೆದು ಹಾಕಿರುತ್ತಾರೆ. ಅವುಗಳನ್ನು ಯಾರು, ಯಾವಾಗ ಹೊಡೆದು ಹಾಕಿರುತ್ತಾರೆ ಎಂದು ಜ್ಞಾಪಕವಿಲ್ಲ. ನಿಡಿ-13 ರಲ್ಲಿ ಸಿದ್ಧಿಖ್ ಅಹಮ್ಮದ್ ಖಾನ್‌ರವರ ಹೆಸರಿನಲ್ಲಿ 18X50 ಅಡಿ ನಾಡ ಹೆಂಚಿನ ಮನೆ ಇದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ.

26) ನಿಡಿ-14 ರಲ್ಲಿ ನಕ್ಷೆಯಲ್ಲಿ ದಕ್ಷಿಣಕ್ಕೆ ಜೈಬುನ್ನಿಸಾರವರ ಉಳಿಕೆ ಜಾಗ ಇದೆ ನಮೂದಿಸಿದೆ ಎಂದರೆ ಸರಿ. ನಿಡಿ-14 ರಲ್ಲಿ ದೃಢೀಕರಣ ಪತ್ರ ಮತ್ತು ನಕ್ಷೆಯಲ್ಲಿ ಸ್ವತ್ತಿನ ಅಳೆಯು 50X11 ಅಡಿ ಮತ್ತು 50X29 ಅಡಿ ಅಂದರೆ ಒಟ್ಟು 50X40 ಅಡಿ ಎಂದು ನಮೂದಿಸಿದೆ ಎಂದರೆ ಸರಿ. ನಿಡಿ-14 ರಲ್ಲಿ ನಮೂದಿಸಿದ ಅಳತೆ ಸರಿ ಇರುತ್ತದೆ. ಯಾವ ಕಾರಣಕ್ಕಾಗಿ ತಿದ್ದುಪಡಿ ಪತ್ರವನ್ನು ಮಾಡಿಸಿಕೊಂಡಿದ್ದೆವು ಎಂದು ನನಗೆ ಗೊತ್ತಿಲ್ಲ. ನಿಡಿ-46 ಇಸಿಯಲ್ಲಿ ನಾಡ ಹೆಂಚಿನ ಮನೆ ಇದೆ ನಮೂದಿಸಿರುತ್ತಾರೆ ಎಂದರೆ ನಿಜ. ನಾನು ಮತ್ತು ನನ್ನ ಅಣ್ಣ ಸೇರಿ ನಿಡಿ-45 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ

ಸರಿಯಲ್ಲ. ನಿಡಿ.45 ರಲ್ಲಿ ದಸ್ತಾವೇಜು ಬರಹಗಾರರ ರುಜುವನ್ನು, ಜೈಬುನ್ನಿಸಾರವರ ಹಾಗೂ ನಿಸ್ಸಾರ್ ಅಹಮ್ಮದ್ ರಬ್ಬಾನಿ ರವರ ಸಹಿಯನ್ನು ನಕಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಸ್ಸಾರ್ ಅಹಮ್ಮದ್ ರಬ್ಬಾನಿ ರವರು ಮಡಿಕೇರಿಯಲ್ಲಿ ಉರ್ದು ಶಿಕ್ಷಕರಾಗಿದ್ದು, ಅವರು ಉರ್ದು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸುಳ್ಳು. ನಾನು ನಿಸ್ಸಾರ್ ಅಹಮ್ಮದ್ ರಬ್ಬಾನಿರವರನ್ನು ಯಾವತ್ತೂ ನೋಡಿರಲಿಲ್ಲ ಎಂದರೆ ಸರಿ. ನಿಸ್ಸಾರ್ ಅಹಮ್ಮದ್ ರಬ್ಬಾನಿರವರ ಸಹಿಯನ್ನು ಹಾಗೂ ಅವರನ್ನು ನೋಡದೇ ಇದ್ದರೂ ಸಹ ನನ್ನ ಕೇಸನ್ನು ಬಲಪಡಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ನನ್ನ ಕೈಗೆ ಯಾವಾಗ ನಿಡಿ.01 ರಿಂದ ನಿಡಿ.48 ದಾಖಲೆಗಳನ್ನು ಕೊಟ್ಟಿದ್ದರು ಎಂದು ಜ್ಞಾಪಕ ಇಲ್ಲ. ಅಂದಾಜು 4-5 ವರ್ಷಗಳ ಹಿಂದೆ ಕೊಟ್ಟಿದ್ದರಾ ಎಂದರೆ ಸಾಕ್ಷಿ ಜ್ಞಾಪಕವಿಲ್ಲ ಎನ್ನುತ್ತಾರೆ.

27) ಕ್ರಯಪತ್ರ ಬರೆಯುವಾಗ ದಾನಪತ್ರ ಇರುವ ಬಗ್ಗೆ ವಕೀಲರಿಗೆ ಮಾಹಿತಿ ನೀಡಲು ನನಗೆ ತೊಂದರೆ ಇರಲಿಲ್ಲ. ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವಾಗ ಹಾಗೂ ನಂತರದಲ್ಲಿ ದಾನಪತ್ರದ ಬಗ್ಗೆ ನಮೂದಿಸಲು ಹಾಗೂ ಹಾಜರುಪಡಿಸಲು ನನಗೂ ಮತ್ತು ನನ್ನ ಅಣ್ಣನಿಗೆ ತೊಂದರೆ ಇರಲಿಲ್ಲ. ಅಸಲು ದಾವಾ ಸಂಖ್ಯೆ: 411/15 ಮತ್ತು 414/15 ರಲ್ಲಿ ದಾವಾ ಸಲ್ಲಿಸುವಾಗ, ಜೈಬುನ್ನಿಸಾರವರ ದಾನಪತ್ರದ ಬಗ್ಗೆ ವಕೀಲರಿಗೆ ಮಾಹಿತಿ ನೀಡಲು ತೊಂದರೆ ಇರಲಿಲ್ಲ. ಕ್ರಯಪತ್ರವನ್ನು ಮಾಡಿಸಿಕೊಳ್ಳುವ ಮೊದಲು ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಿಡಿ.03 ನ್ನು ನಾನು ಓದಿರುವುದಿಲ್ಲ. ಈ ಪತ್ರವನ್ನು ನಾನು ನೋಡಿರುವುದಿಲ್ಲ. ನಿಡಿ.03 ರಲ್ಲಿ ಜೈಬುನ್ನಿಸಾರವರಿಗೆ ಯಾವ ರೀತಿಯಲ್ಲಿ ಸ್ವತ್ತು ಬಂದಿತ್ತು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನನ್ನ ಅಣ್ಣ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಮೊಹಮ್ಮದ್ ಕಾನೂನಿನ ಪ್ರಕಾರ ಜೈಬುನ್ನಿಸಾರವರಿಗೆ ಅಷ್ಟು ವಿಸ್ತೀರ್ಣದ ಸ್ವತ್ತನ್ನು ಬಂದೇ ಇಲ್ಲದ ಕಾರಣ ಅವರಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸುಳ್ಳು. ವಾದಿಯವರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ಜೈಬುನ್ನಿಸಾರವರು ಈ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಲ್.ವಿ.ಆರ್. ವಕೀಲರಿಂದಃ

1 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿರುವುದರಿಂದ, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.